KARN220056052022

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ.</u>**
**<u>ಚನ್ನಪಟ್ಟಣ.</u>**

**ಉಪಸ್ಥಿತರು: ಶ್ರೀಮತಿ.ಉಷಾರಾಣಿ ಬಿ.ಎನ್.,** ಬಿ.ಎ ಎಲ್‌ಎಲ್.ಬಿ., ಎಲ್.ಎಲ್.ಎಂ.,
**ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.**

**<u>ದಿನಾಂಕ: 16 ನೇ ಅಕ್ಟೋಬರ್-2024</u>**

**<u>ಓ.ಎಸ್.ನಂ.340/2022</u>**

**<u>ವಾದಿಗಳು</u>** : ಶ್ರೀ.ಆನಂದ ವೈ.

-ವಿರುದ್ಧ-

**<u>ಪ್ರತಿವಾದಿಗಳು</u>** : ಶ್ರೀ.ಪುಟ್ಟಸ್ವಾಮಿ ಮತ್ತು ಇತರರು

**<u>ಮಧ್ಯಂತರ ಅರ್ಜಿ ಸಂಖ್ಯೆ:12</u>**

**<u>ವಾದಿ/ಅರ್ಜಿದಾರರು</u>** : ಶ್ರೀ.ಆನಂದ ವೈ

-ವಿರುದ್ಧ-

**<u>ಪ್ರತಿವಾದಿಗಳು/ಎದುರುದಾರ</u>** : ಶ್ರೀ.ಪುಟ್ಟಸ್ವಾಮಿ ಮತ್ತು ಇತರರು

**<u>ಮಧ್ಯಂತರ ಅರ್ಜಿ ಸಂಖ್ಯೆ:12 ರ ಮೇಲಿನ ಆದೇಶ:</u>**

ಮಾನ್ಯ ವಾದಿಯ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ:**12** ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರಡಿಯಲ್ಲಿ ಸಲ್ಲಿಸಿ, ನ್ಯಾಯಾಲಯದ ಆಯುಕ್ತರ ಮುಖೇನ ದಾವಾ ಷೆಡ್ಯೂಲ್ ರಸ್ತೆಯ ಅಸ್ಥಿತ್ವ ಮತ್ತು ಅಕ್ಕಪಕ್ಕದ ಸ್ವತ್ತಿಗೆ ಅನುಗುಣವಾಗಿ ಇದೆಯೇ ಎಂಬುದರ ಬಗ್ಗೆ ಗುರುತಿಸಲು ತಾಂತ್ರಿಕ ವ್ಯಕ್ತಿಯನ್ನು ಆಯುಕ್ತರನ್ನಾಗಿ ನೇಮಿಸಲು ಆದೇಶಿಸಬೇಕೆಂದು ಕೋರಿರುತ್ತಾರೆ.

2. ವಾದಿಯು ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಷೆಡ್ಯೂಲ್ ಸರ್ಕಾರಿ ರಸ್ತೆಯಲ್ಲಿ ಸಂಚರಿಸಲು ಯಾವುದೇ ತೊಂದರೆ ನೀಡುವುದಾಗಲೀ, ಅಡಚಣೆ ಉಂಟುಮಾಡುವುದಾಗಲೀ ಮಾಡದಂತೆ ಹಾಗೂ

ಉಭಯತ್ರರು ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗುವಂತೆ ಶಾಶ್ವತ ನಿರ್ಭಂಧಕಾಜ್ಞೆ ಕೋರಿ ಸಲ್ಲಿಸಿರುತ್ತಾರೆ. ಅದರಂತೆ ನ್ಯಾಯಾಲಯವು ಮಧ್ಯಂತರ ಅರ್ಜಿ ಮೇರೆಗೆ ಏಕಪಕ್ಷೀಯವಾಗಿ ಆದೇಶವನ್ನು ಮಾಡಲಾಗಿದ್ದು, ಅದು ಈಗಲೂ ಮುಂದುವರೆಯುತ್ತಿರುತ್ತದೆ. ಪ್ರತಿವಾದಿಗಳು ಒಂದೇ ಕುಟುಂಬದವರಾಗಿದ್ದು, ಅವರಿಗೂ ಸಹ ದಾವಾ ಷೆಡ್ಯೂಲ್ ಸರ್ಕಾರಿ ರಸ್ತೆಯ ಪಕ್ಕದಲ್ಲಿ ತಾತ್ಕಾಲಿಕವಾಗಿ ಇರುವ ಶೆಡ್ಡಿನಲ್ಲಿ ಉಪಯೋಗಿಸಿಕೊಂಡು ಹಾಗೂ ರಸ್ತೆಯ ಪಕ್ಕದಲ್ಲಿ ಸರ್ಕಾರಿ ಜಾಗದಲ್ಲಿ ಒಂದು ಮನೆಯನ್ನು ಕಟ್ಟಿಕೊಂಡು ದಾವಾ ಷೆಡ್ಯೂಲ್ ಸರ್ಕಾರಿ ರಸ್ತೆಯ ಒಂದು ಬದಿಯಲ್ಲಿ ರಸ್ತೆಯನ್ನು ಹೊರತುಪಡಿಸಿ ಮಂಜೂರಾಗಿರುತ್ತದೆ. ಈ ಸರ್ಕಾರಿ ಷೆಡ್ಯೂಲ್ ರಸ್ತೆಯು ಸುಮಾರು ವರ್ಷಗಳಿಂದಲೂ ಅಸ್ಥಿತ್ವದಲ್ಲಿ ಅಡ್ಡದಿಡ್ಡಿಯಾಗಿ ಅಂದರೆ ಮೊದಲಿಗೆ ನೇರವಾಗಿ ಇರುವಂತೆ ಇಲ್ಲದೇ ಸುಮಾರು 40 ರಿಂದ 50 ಅಡಿ ಅಗಲದಲ್ಲಿ ಇದ್ದಿದ್ದು, ನಂತರ ಈಗ ಹಾಲಿ 30 ಅಡಿ ಅಗಲಕ್ಕೆ ಸೀಮಿತಗೊಂಡಿರುತ್ತದೆ. ಕಣ್ವ-ಚನ್ನಪಟ್ಟಣ ಮುಖ್ಯ ರಸ್ತೆಯೂ ಮೊದಲಿಗೆ ಇದ್ದಂತಹ ವಿಸ್ತೀರ್ಣವನ್ನು ಎರಡು ಬದಿಗಳ ಹಂಚಿನಲ್ಲಿ ಇತ್ತೀಚೆಗೆ ಹೆಚ್ಚಿನ ಅಗಲೀಕರಣ ಮಾಡಿರುತ್ತಾರೆ. ಇದರಿಂದಾಗಿ ಮೊದಲಿಗೆ ಕಣ್ವ ರಸ್ತೆಯ ಹಂಚಿನಲ್ಲಿ ತಗ್ಗಿನ ಪ್ರದೇಶವಾಗಿದ್ದ ಕಾರಣ ಪ್ರಾರಂಭದಲ್ಲಿ ಸ್ವಲ್ಪ ತಿರುವು ಇದ್ದು, ಈಗ ಕಣ್ವ ರಸ್ತೆಯನ್ನು ಅಗಲೀಕರಣ ಮಾಡಿದ ಮೇಲೆ ಕಣ್ವ ರಸ್ತೆಯಿಂದ ಷೆಡ್ಯೂಲ್ ರಸ್ತೆಯು ನೇರವಾಗಿ ಸೇರುತ್ತದೆ. ಅದರಂತೆ ಕಚ್ಚಾನಕಾಶೆಯನ್ನು ತಯಾರು ಮಾಡಲಾಗಿರುತ್ತದೆ. ಪ್ರತಿವಾದಿಗಳು ಹೇಳುವಂತಹ ಕಣ್ವ-ಚನ್ನಪಟ್ಟಣ ರಸ್ತೆಯ ಅಂದರೆ ಕಣ್ವ ಅಣಕಟ್ಟಿನ ಕಡೆ ಹೋಗುವ ರಸ್ತೆಯಲ್ಲಿ ಮುಂದಕ್ಕೆ ಹೋದರೆ ಮುತ್ತುರಾಯನ ದೇವಸ್ಥಾನಕ್ಕೆ ಹೋಗುವ ಸರ್ಕಾರಿ ರಸ್ತೆ ಎಂದು ಹೇಳುತ್ತಿರುವ ರಸ್ತೆಯು ಬೇರೆಯ ರಸ್ತೆಯಾಗಿದ್ದು, ಅದು ಸಹ ದಾವಾ ಷೆಡ್ಯೂಲ್ ರಸ್ತೆಯ ರೀತಿಯಲ್ಲಿಯೇ ಇರಬಹುದಾಗಿದ್ದು, ಅದಕ್ಕೂ ಸಹ ಇದೇ ಸ್ಥಾನ ಮಾನ ಇರಬಹುದು. ಇದರ ಜೊತೆಗೆ ದಾವಾ ರಸ್ತೆಯ ಅಕ್ಕಪಕ್ಕದ ವ್ಯವಹಾರಗಳು ನಡೆಯುವಾಗ ರಸ್ತೆಯ ಅಸ್ತಿತ್ವದ ಬಗ್ಗೆ ಸಹಜ ಸಂಗತಿಗಳು ದಾಖಲಿಸಲ್ಪಟ್ಟಿರುತ್ತವೆ. ಇದರ ಜೊತೆಗೆ ಈ ಸರ್ಕಾರಿ ರಸ್ತೆಯ ದಾವಾ ಸ್ವತ್ತು ಯಾರಿಗೂ ಯಾವುದೇ ರೀತಿಯಲ್ಲಿಯೂ ಮಂಜೂರಾಗುವುದಾಗಲೀ, ಅಧಿಕಾರ ನೀಡುವುದಾಗಲೀ ಮಾಡಿರುವುದಿಲ್ಲ. ಇಂತಹ ಸಂದರ್ಭದಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ಅಸ್ಥಿತ್ವದ ಬಗ್ಗೆ ದಾಖಲೆಗಳು, ಛಾಯಚಿತ್ರಗಳು ಇದ್ದರೂ ಸಹ ಪ್ರತಿವಾದಿಗಳು ಅಲ್ಲಗಳೆಯುತ್ತಿರುವುದರಿಂದ ತಾಂತ್ರಿಕ ಜ್ಞಾನವುಳ್ಳ ವ್ಯಕ್ತಿಯನ್ನು ನ್ಯಾಯಾಲಯದ

KARN220056052022

ಆಯುಕ್ತರಾಗಿ ಸ್ಥಳ ಪರಿಶೀಲಿಸಿ, ನ್ಯಾಯಾಲಯದ ಗಮನಕ್ಕೆ ತರುವುದು ಸೂಕ್ತವಾಗಿರುತ್ತದೆ. ಈ ಎಲ್ಲಾ ವಿಚಾರಗಳನ್ನು ಸ್ಥಳೀಯ ತನಿಖೆ ಮಾಡಿಸುವ ಮೂಲಕ ರುಜುವಾತುಪಡಿಸುವ ಅಗತ್ಯತೆಯಿರುತ್ತದೆ. **ಆದ್ದರಿಂದ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಮಧ್ಯಂತರ ಅರ್ಜಿಸಂಖ್ಯೆ:12 ನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.**

3. ಈ ಮಧ್ಯಂತರ ಅರ್ಜಿಗೆ ಪ್ರತಿವಾದಿಯು ತನ್ನ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ, ವಾದಿಯರು ಸಲ್ಲಿಸಿರುವ ಅರ್ಜಿಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲವೆಂದು, ವಾದಿಯು ಪ್ರತಿವಾದಿಗಳ ವಿರುದ್ಧ ವಾಸ್ತವವಾಗಿ ಇಲ್ಲದೇ ಇರುವ ಸರ್ಕಾರಿ ರಸ್ತೆಯನ್ನು ದಾವಾ ಸ್ವತ್ತನ್ನಾಗಿ ಮಾಡಿ, ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವಾ ಸಲ್ಲಿಸಿರುವುದು ಕಾನೂನು ಪ್ರಕಾರ ಊರ್ಜಿತವಾಗಿಲ್ಲದಿರುವುದರಿಂದ ಕಾಲಹರಣ ಮಾಡುವ ಉದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುವುದರಿಂದ ವಜಾಗೊಳಿಸಬೇಕೆಂದು ಕೋರಿರುತ್ತಾರೆ. ಮುಂದುವರೆದು ಸದರಿ ದಾವೆಯಲ್ಲಿ ವಾದಿಯು ಶಾಶ್ವತ ತಡೆಯಾಜ್ಞೆ ಕೋರಿ ಸಲ್ಲಿಸಿರುವ ದಾವೆಯಲ್ಲಿ ನ್ಯಾಯಾಲಯದ ನಿಯೋಗಿಯನ್ನು ನೇಮಕಮಾಡುವಂತೆ, ಅರ್ಜಿ ಸಲ್ಲಿಸಲು ಯಾವುದೇ ಅವಕಾಶವಿರುವುದಿಲ್ಲ. ಪ್ರಸ್ತುತ ದಾವೆಯು ಮಧ್ಯಂತರ ಅರ್ಜಿಗಳ ಮೇಲೆ ವಾದಮಂಡನೆಗಾಗಿ ಕಾಯ್ದಿರಿಸಿದ ಸಂದರ್ಭದಲ್ಲಿ ಈ ಮಧ್ಯಂತರ ಅರ್ಜಿ ಸಂಖ್ಯೆ:12 ನ್ನು ಸಲ್ಲಿಸಿರುವುದು ಕಾನೂನಿನ ಪ್ರಕಾರ ಊರ್ಜಿತವಾಗಿರುವುದಿಲ್ಲ. ಮುಂದುವರೆದು ವಾದಿಯು ಸಲ್ಲಿಸಿರುವ ಅರ್ಜಿಯು ಸುಳ್ಳಿನಿಂದ ಕೂಡಿದ್ದು, ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳಿಗೂ ಅರ್ಜಿಯಲ್ಲಿ ತಿಳಿಸಿರುವ ಅಂಶಗಳಿಗೂ ಪರಸ್ಪರ ವ್ಯತ್ಯಾತವಿರುತ್ತದೆ. ಅಂದರೆ ಅರ್ಜಿಯಲ್ಲಿ ದಾವಾ ಷೆಡ್ಯೂಲ್ ರಸ್ತೆಯ ಅಸ್ಥಿತ್ವ ಹಾಗೂ ಅಕ್ಕಪಕ್ಕದ ಸ್ವತ್ತಿನ ಬಗ್ಗೆ ಗುರುತಿಸಲು ತಾಂತ್ರಿಕ ವ್ಯಕ್ತಿಯನ್ನು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಲು ಕೋರಿಕೊಂಡಿದ್ದು, ಆದರೆ ಪ್ರಮಾಣ ಪತ್ರದಲ್ಲಿ ದಾವಾ ರಸ್ತೆಯನ್ನು ಸರ್ಕಾರಿ ರಸ್ತೆ ಎಂದು ಸ್ವಯಂ ಪ್ರೇರಿತವಾಗಿ ತಿಳಿಸುವ ಮೂಲಕ ಪ್ರತಿವಾದಿಗಳಿಗೆ ಯಾವುದೇ ಆಸ್ತಿ ಇರುವುದಿಲ್ಲ ಎಂಬಂತೆ ತಿಳಿಸಿರುತ್ತಾರೆ. ಪ್ರತಿವಾದಿಗಳಿಗೆ ಚನ್ನಪಟ್ಟಣ ತಾಲ್ಲೂಕು, ಕನ್ನ ಮಂಗಳ ಗ್ರಾಮದ ಸರ್ವೇ ನಂಬರಿನಲ್ಲಿ 3 ಎಕರೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಜಮೀನುಗಳಿಗೆ ಕಣ್ವ ಮುಖ್ಯ ರಸ್ತೆಯಿಂದ ಸಂಚರಿಸಬೇಕಾಗಿರುತ್ತದೆ. ಈ ಕಾರಣದಿಂದಾಗಿ ಪ್ರತಿವಾದಿಗಳು ಹಾಗೂ ಮುಂದಿನ

ಜಮೀನಿನ ಮಾಲೀಕರು ಕಾಲುದಾರಿಯನ್ನು ಬಿಟ್ಟುಕೊಂಡಿರುತ್ತಾರೆಯೇ ಹೊರತು, ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಪ್ರತಿವಾದಿಗಳ ಜಮೀನುಗಳಲ್ಲಿ ಯಾವುದೇ ಸರ್ಕಾರಿ ಅಥವಾ ನಕಾಶೆ, ರಸ್ತೆ ಇರುವುದಿಲ್ಲ. **ಆದ್ದರಿಂದ ಈ ಅರ್ಜಿಯನ್ನು ಖರ್ಚುಸಹಿತ ವಜಾಗೊಳಿಸಬೇಕೆಂದು ಕೋರಿರುತ್ತಾರೆ.**

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

**ಃಅಂಶಗಳುಃ**

1. **ಈ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನಮಾಡಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ ಅವರ ವರದಿಯನ್ನು ಪಡೆಯುವ ಅವಶ್ಯಕತೆ ಇದೆಯೇ?**

2. **ಮಾಡುವ ಆದೇಶ ಏನು?**

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

**ಅಂಶ ಸಂಖ್ಯೆ1 ಃ ನಕಾರಾತ್ಮಕವಾಗಿ**
**ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,**

**ಕಾರಣಗಳು**

7. **ಅಂಶ ಸಂಖ್ಯೆಃ1ಃ** ವಾದಿಯು ಪ್ರತಿವಾದಿಯರ ವಿರುದ್ದ ಈ ದಾವೆಯನ್ನು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಸಲ್ಲಿರುತ್ತಾರೆ. ಈ ವಾದಿಯರು ಈ ಪ್ರಸ್ತುತ ಅರ್ಜಿಯನ್ನು ತಾಂತ್ರಿಕ ವ್ಯಕ್ತಿಯನ್ನು ನ್ಯಾಯಾಲಯದ ನಿಯೋಗಿಯನ್ನಾಗಿ ನೇಮಕ ಮಾಡಲು ಕೋರಿ ಸಲ್ಲಿಸಿರುತ್ತಾರೆ. ಪ್ರತಿವಾದಿಗಳು ಈ ಮಧ್ಯಂತರ ಅರ್ಜಿಯನ್ನು ವಿರೋಧಿಸಿ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ.

KARN220056052022

8. ಮಾನ್ಯ ಪ್ರತಿವಾದಿಗಳ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಪ್ರಸ್ತುತ ದಾವೆಯು ಮಧ್ಯಂತರ ಅರ್ಜಿಗಳ ಮೇಲೆ ವಾದ ಮಂಡನೆಗಾಗಿ ಕಾಯ್ದಿರಿಸಿದ ಸಂದರ್ಭದಲ್ಲಿ ವಾದಿಗಳು ಈ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಲು ಕೋರಿ ಸಲ್ಲಿಸಿದ್ದು, ಆದ್ದರಿಂದ ಈ ಅರ್ಜಿಯು ಊರ್ಜಿತವಾಗಿರುವುದಿಲ್ಲವೆಂದು ಆದರೆ ಕಣ್ವ ಮುಖ್ಯ ರಸ್ತೆಯಿಂದ ಪ್ರತಿವಾದಿಗಳ ಜಮೀನು ಮತ್ತು ಮನೆಗೆ ಸಂಚರಿಸಲು ಬಿಟ್ಟುಕೊಂಡಿರುವ ಕಾಲುದಾರಿಯನ್ನು ಹಾಗೂ ವಾದಿಯ ಜಮೀನಿಗೆ ಸಂಪರ್ಕ ಕಲ್ಪಿಸುವ ಕಣ್ವ ಮುಖ್ಯ ರಸ್ತೆಯಿಂದ ಹನುಮಂತರಾಯನ ದೇವಸ್ಥಾನಕ್ಕೆ ಹೋಗುವ ರಸ್ತೆಯನ್ನು ಸಹ ಪರಿಶೀಲಿಸಬೇಕಾಗಿದ್ದು, ವಾದಿ ಹಾಗೂ ಪ್ರತಿವಾದಿಗಳ ಜಮೀನಿಗೆ ಯಾವ ಯಾವ ರಸ್ತೆಗಳು/ಕಾಲುದಾರಿಗಳು ಇವೆ ಎಂದು ತಿಳಿಯುವ ಸಂಬಂಧವಾಗಿ ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಬಹುದು ಎಂದು ತಿಳಿಸಲಾಗಿರುತ್ತದೆ. ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನ ಮಾಡಲು ನ್ಯಾಯಾಲಯದ ನಿಯೋಗಿಯನ್ನು ನೇಮಕ ಮಾಡಿ, ಅವರ ವರದಿಯನ್ನು ಪಡೆದು ದಾವೆಯನ್ನು ತೀರ್ಮಾನಮಾಡುವ ಅಗತ್ಯತೆಯಿರುತ್ತದೆ. ಈ ಎಲ್ಲಾ ಕಾರಣಗಳಿಂದ ವಾದಿಗಳು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಪುರಸ್ಕಾರಗೊಳ್ಳಲು ಯೋಗ್ಯವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟು **ಅಂಶ ಸಂಖ್ಯೆ:1 ನ್ನು ಸಕಾರಾತ್ಮಕವಾಗಿ ಉತ್ತರಿಸಿದೆ.**

12. **ಅಂಶ ಸಂಖ್ಯೆ:2:-** ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

**ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:12 ನ್ನು ಪುರಸ್ಕರಿಸಲಾಗಿದೆ.**

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2024** ನೇ ಇಸವಿ **ಅಕ್ಟೋಬರ್ 16** ನೇ ದಿನಾಂಕದಂದು ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

Sd/-
**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**

KARN220056052022

ಮುಕ್ತ ನ್ಯಾಯಾಲಯದಲ್ಲಿ ಆದೇಶ ಉಚ್ಚರಿಸಲಾಗುತ್ತದೆ
(ಪ್ರತ್ಯೇಕ ಆದೇಶ ಹಾಳೆಯನ್ನು ವೀಕ್ಷಿಸಿ)

ಆದೇಶ

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ12 ನ್ನು ಪುರಸ್ಕರಿಸಲಾಗಿದೆ.

**For steps 05.11.2024.**

**Sd/-**

**(ಉಷಾರಾಣಿ ಬಿ.ಎನ್.)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ. ಎಫ್? ಸಿ., ಚನ್ನಪಟ್ಟಣ.**